ಕರ್ನಾಟಕ ಸರ್ಕಾರ
ಕನ್ನಡ ಕಾಯಕ ವರ್ಷ ೨೦೨೦-೨೧

ಸಂಖ್ಯೆ: ಕಾಶಿಇ/53/ಪಿಂಚಣಿ/ಸಿಆರ್3/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:25.08.2021

## ಸುತ್ತೋಲೆ

ವಿಷಯ; ದಿನಾಂಕ:01-04-2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ನೇಮಕ ಹೊಂದಿರುವ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ ಒಳಪಡುವ ಸರ್ಕಾರಿ ನೌಕರರಿಗೆ ನಿವೃತ್ತಿ ಮತ್ತು ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ

ವಿಷಯ: 1) ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018 ಬೆಂಗಳೂರು ದಿನಾಂಕ:23/06/2018
2) ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018 (ಭಾ) ಬೆಂಗಳೂರು ದಿನಾಂಕ:19/08/2021

************

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ ದಿನಾಂಕ:01-04-2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ನೇಮಕ ಹೊಂದಿರುವ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ ಒಳಪಡುವ ಸರ್ಕಾರಿ ನೌಕರರಿಗೆ ನಿವೃತ್ತಿ ಮತ್ತು ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ,

ಉಲ್ಲೇಖ(2)ರ ಸರ್ಕಾರಿ ಆದೇಶದಲ್ಲಿ ದಿನಾಂಕ:01-04-2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರಿದ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನುದಿನಾಂಕ:01-04-2018ರಿಂದ ಜಾರಿಗೆ ಬರುವಂತೆ ವಿಸ್ತರಿಸಿ ಮಾರ್ಗಸೂಚಿಯನ್ನು ಹೊರಡಿಸಿ ಆದೇಶಿಸಲಾಗಿದೆ, ಸದರಿ ಸರ್ಕಾರಿ ಆದೇಶಗಳನ್ವಯ ತಮ್ಮ ಕಛೇರಿ/ಕಾಲೇಜುಗಳ ವ್ಯಾಪ್ತಿಗೆ ಒಳಪಡುವ ದಿನಾಂಕ:01-04-2006ರಂದು ಮತ್ತು ತದನಂತರ ಸರ್ಕಾರಿ ನೇಮಕಾತಿ ಹೊಂದಿರುವ ಬೋಧಕ/ಬೋದಕೇತರ ಸಿಬ್ಬಂದಿಗಳ ವಯೋನಿವೃತ್ತಿ/ ಮರಣ ಪ್ರಕರಣಗಳಲ್ಲಿ ಪಿಂಚಣಿ/ಕುಟುಂಬ ಪಿಂಚಣಿ ಮಂಜೂರಾತಿ ಸಂಬಂಧ ಉಲ್ಲೇಖ(2)ರಂತೆ ಪರಿಶೀಲಿಸಿ ಆಗತ್ಯ ಕ್ರಮವಹಿಸಿ ಪ್ರಸ್ತಾವನೆಯನ್ನು ಸೇವಾಪುಸ್ತದೊಂದಿಗೆ ನೇರವಾಗಿ ಮಹಾಲೇಖಪಾಲರಿಗೆ ಕಳುಹಿಸಲು ಸೂಚಿಸಲಾಗಿದೆ,

ಮುಂದುವರೆದು ದಿನಾಂಕ:01-04-2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ನೇಮಕಾತಿ ಹೊಂದಿ ತಮ್ಮಸೇವಾವಧಿಯಲ್ಲಿ ವಯೋನಿವೃತ್ತಿ/ಮರಣ ಹೊಂದಿರುವ ಪ್ರಭಾರ ಪ್ರಾಂಶುಪಾಲರು/ಅನ್ಯಕಾರ್ಯನಿಮಿತ್ತ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ್ದಲ್ಲಿ ಅಂತಹವರ ಪಿಂಚಣಿ/ಕುಟುಂಬಪಿಂಚಣಿ ಮಂಜೂರಾತಿ ಸಂಬಂಧ ಈ ಕಛೇರಿಯಿಂದ ಅನುಮತಿ ಪಡೆದು ನಂತರ ತಮ್ಮ ಕಛೇರಿ/ಕಾಲೇಜು ಹಂತದಿಂದಲೇ ನೇರವಾಗಿ ಮಹಾಲೇಖಪಾಲರಿಗೆ ಪಿಂಚಣಿ/ಕುಟುಂಬಪಿಂಚಣಿ ಮಂಜೂರಾತಿಗಾಗಿ ಕಳುಹಿಸುವಂತೆ ಸೂಚಿಸುತ್ತಾ ಉಲ್ಲೇಖಿತ ಸರ್ಕಾರದ ಆದೇಶಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:-**

1. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು, ಮೈಸೂರು, ಮಂಗಳೂರು , ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ-ಮಾಹಿತಿ ಹಾಗೂ ಆಗತ್ಯ ಕ್ರಮಕ್ಕಾಗಿ
2. ಪ್ರಾಂಶುಪಾಲರು, ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರಿಗೆ - ಮಾಹಿತಿ ಹಾಗೂ ಆಗತ್ಯ ಕ್ರಮಕ್ಕಾಗಿ

**ಆಂತರಿಕ ಪ್ರತಿ:-**

1. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು ಹಾಗೂ ಎಲ್ಲಾ ವಿಭಾಗಗಳ ಅಧೀಕ್ಷಕರುಗಳು
2. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು - ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್ ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ
3. ಕಛೇರಿ ಪ್ರತಿ